ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ,**
# ಜಿ.ಬಿ.-2, ಜಿಲ್ಲಾಡಳಿತ ಭವನ, ಪೆದ್ದೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ.
**Email ID: dhochikballapur@gmail.com.** **Phone & Fax: 08156-277040**

ಸಂಖ್ಯೆ:ಎನ್.ಹೆಚ್.ಎಂ/ಚಿಪುರ/ನೇಮಕಾತಿ/01/2020-21 ದಿನಾಂಕ:- 06-05-2021

ರವರಿಗೆ,

ಹಿರಿಯ ಸಹಾಯಕ ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಚಿಕ್ಕಬಳ್ಳಾಪುರ ಜಿಲ್ಲೆ.

ಮಾನ್ಯರೇ,

**ವಿಷಯ**:- 2020-21ನೇ ಸಾಲಿನ ಚಿಕ್ಕಬಳ್ಳಾಪುರ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ವೈದ್ಯಕೀಯ ಮತ್ತು ಅರೆವೈದ್ಯಕೀಯ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಲು ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿರುವ ಕುರಿತು.

* * * * *

ಚಿಕ್ಕಬಳ್ಳಾಪುರ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 2020-21ನೇ ಸಾಲಿನ ಆರ್.ಓ.ಪಿ ಅನುಮೋದನೆಯಂತೆ (31-03-2022ರ ಅಂತ್ಯದವರೆಗೆ) ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಗುತ್ತಿಗೆ ಆಧಾರದಲ್ಲಿ ವೈದ್ಯಕೀಯ ಮತ್ತು ಅರೆವೈದ್ಯಕೀಯ ಹುದ್ದೆಗಳನ್ನು ಮೆರಿಟ್ ಕಮ್ ರೋಸ್ಟರ್ ಆಧಾರದ ಮೇಲೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಲು ನೇಮಕಾತಿ ಅಧಿಸೂಚನೆ ವಿವರಗಳನ್ನು https://chikkaballapur.nic.in ವೆಬ್‌ಸೈಟ್‌ನಲ್ಲಿ ಲಗತ್ತಿಸಿದ್ದು, ಆನ್ ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಜಾಹೀರಾತು ನೀತಿ ಅನ್ವಯ ದಿನಪತ್ರಿಕೆಯಲ್ಲಿ ಪ್ರಚುರ ಪಡಿಸಲು ಕೋರಿದೆ ಹಾಗೂ ಪತ್ರಿಕಾ ಪ್ರಕಟಣೆಯ ಅನುಮೋದಿತ ದರಗಳ ಪ್ರಕಟಣೆ ವೆಚ್ಚವನ್ನು ಇಲಾಖೆ ವತಿಯಿಂದ ಭರಿಸಲಾಗುವುದು.

ತಮ್ಮ ನಂಬುಗೆಯ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಚಿಕ್ಕಬಳ್ಳಾಪುರ ಜಿಲ್ಲೆ

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ**
**ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ವಿಭಾಗ**
# ಜಿ.ಬಿ.–7, ಜಿಲ್ಲಾಡಳಿತ ಭವನ, ಪಟ್ರೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ.
**Email ID: dhochikballapur@gmail.com.** **Phone & Fax: 08156-277040**

ಸಂಖ್ಯೆ:ಆರ್‌ಸಿಹೆಚ್/ಚಿಪುರ/ಎನ್.ಹೆಚ್.ಎಂ/ನೇಮಕಾತಿ/01/2021–22 ದಿನಾಂಕ:– 06–05–2021

# ಅಧಿಸೂಚನೆ

**ವಿಷಯ:–** ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಖಾಲಿಯಿರುವ ಹಾಗೂ 2020–21ನೇ ಸಾಲಿನ ಆರ್.ಓ.ಪಿ ಅಡಿಯಲ್ಲಿ ಅನುಮೋದನೆಯಾಗುವ ಹುದ್ದೆಗಳನ್ನು ಆನ್‌ಲೈನ್ ಮೂಲಕ ಭರ್ತಿಮಾಡುವ ಬಗ್ಗೆ.

**ಉಲ್ಲೇಖ:–**
1. 2020–21ನೇ ಸಾಲಿನ ಆರ್.ಓ.ಪಿಯ ಅನುಮೋದನೆಯಂತೆ.
2. ಮಾನ್ಯ ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು ರವರ ಸುತ್ತೋಲೆ ಪತ್ರದ ಸಂಖ್ಯೆ: NHM/SPMU/HR/152/2014-15. ದಿನಾಂಕ: 23/03/2021.

* * * * *

ಚಿಕ್ಕಬಳ್ಳಾಪುರ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 2020–21ನೇ ಸಾಲಿನ ಆರ್.ಓ.ಪಿ ಅನುಮೋದನೆಯಂತೆ ಹಾಗೂ ಉಲ್ಲೇಖ (2)ರಲ್ಲಿನ ಮಾನ್ಯ ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ) ರವರ ಸುತ್ತೋಲೆ ಪತ್ರದನ್ವಯ (31/03/2022ರ ಅಂತ್ಯದವರೆಗೆ) ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಖಾಲಿಯಿರುವ ವೈದ್ಯರು ಹಾಗೂ ವೈದ್ಯೇತರ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ಆನ್‌ಲೈನ್ ಮೂಲಕ ನಿಯಮಾನುಸಾರ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ವಿಶೇಷ ಸೂಚನೆಗಳು:**

- ದಿನಾಂಕ:07/05/2021 ರಿಂದ 15/05/2021ರ ಸಂಜೆ 5 ಗಂಟೆಯೊಳಗಾಗಿ https://chikkaballapur.nic.in ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆದು ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.
- **ಕೆಳಕಂಡ ಹುದ್ದೆಗಳಿಗೆ (ಎಂ.ಬಿ.ಬಿ.ಎಸ್ ವೈದ್ಯರು ಹಾಗೂ ತಜ್ಞ ವೈದ್ಯರು ಹೊರತುಪಡಿಸಿ) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಕಂಪ್ಯೂಟರ್ ಜ್ಞಾನ ಕಡ್ಡಾಯವಾಗಿದ್ದು, ಕಿಯೋನಿಕ್ಸ್ ಸಂಸ್ಥೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು,**
- ಕ್ರಮ ಸಂಖ್ಯೆ 1 ರಿಂದ 12 ರವರೆಗಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ದಿನಾಂಕ: 17/05/2021 ರಂದು ಹಾಗೂ ಕ್ರಮ ಸಂಖ್ಯೆ 12 ರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ದಿನಾಂಕ: 18/05/2021ರಂದು ಮೂಲ ದಾಖಲಾತಿಗಳು ಹಾಗೂ ಒಂದು ಸೆಟ್ ಜೆರಾಕ್ಸ್ (ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಆಧಾರ್ ಜೆರಾಕ್ಸ್ ಪ್ರತಿ, ಕಂಪ್ಯೂಟರ್ ಸಾಕ್ಷರತಾ ಪ್ರಮಾಣ ಪತ್ರ, ಜನ್ಮ ದಿನಾಂಕ ದೃಢೀಕರಣ ಪ್ರತಿ {ಎಸ್.ಎಸ್.ಎಲ್.ಸಿ ಅಂಕ ಪಟ್ಟಿ} ಮತ್ತು ವಿಳಾಸ ದೃಢೀಕರಣ ಪತ್ರ ಒಳಗೊಂಡಂತೆ) ಪ್ರತಿಗಳೊಂದಿಗೆ ಬೆಳಿಗ್ಗೆ 10.30ಕ್ಕೆ ಪರಿಶೀಲನೆಗೆ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿಗೆ ಹಾಜರಾಗತಕ್ಕದ್ದು. ಸಂಜೆ 5 ಗಂಟೆ ನಂತರ ಬಂದಂತಹ ಅಭ್ಯರ್ಥಿಗಳನ್ನು ತಿರಸ್ಕರಿಸಲಾಗುವುದು.
- ಮೂಲ ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಇಲಾಖೆ ವತಿಯಿಂದ ಯಾವುದೇ ಪ್ರಯಾಣ ಭತ್ಯೆಯನ್ನು ನೀಡಲಾಗುವುದಿಲ್ಲ.

| Sl.N | Post | FMR Code | Salary as per 2020-21 ROP | Qualification | Vacant | Vacant Place |
|---|---|---|---|---|---|---|
| 1 | OBG (under Laqshya Programme) | B.30.2.1 / 8.1.2.1 | 1,10,000 | DGO/DNB/MD (OBG) Age: Below 70yrs | 2 | CHC Guluru – 1<br>1-? |
| 2 | Anesthetist | B.30.2.3 / 8.1.2.3 | 1,10,000 | DA/MD Anesthesia Age: Below 70yrs | 1 | MCH Gowribidanur-1 |
| 3 | General Pediatrician | B.30.2.2 / 8.1.2.2 | 1,10,000 | MD (Pediatrics)/ MBBS, DCH/DNB Child Age: Below 70yrs | 1 | MCH Gowribidanur-1 |
| 4 | NPHCE Consultant Medicine | B.30.2.4 / 8.1.3.1 | 50,000 | MBBS, MD (Internal Medicine) or Equivalent degree 2 years' Experience of Working in a Hospital. Age limit: 50 yrs. | 2 | DH - 2 |
| 5 | Instructor for Hearing Impaired Children (NPPCD) | B.30.11.17 / 8.1.13.19 | 15,000 | Diploma in Training Young Deaf & Hearing Handicapped (DTYDHH) from a RCI recognized institute. Age: Below 40 yrs | 1 | NPPCD-1 DH |
| 6 | MBBS Doctor (NCD Programme) | 8.1.5.1 | 46,200 | MBBS ಉತ್ತೀರ್ಣರಾಗಿ ಇಂಟರ್ನ್‌ಷಿಪ್‌ನ್ನು ಖಡ್ಡಾಯವಾಗಿ ಪೂರ್ಣಗೊಳಿಸಿರಬೇಕು. ಕೆ.ಎಂ.ಸಿ (ಕರ್ನಾಟಕ ಮೆಡಿಕಲ್ ಕೌನ್ಸಿಲ್) ನೋಂದಣಿಯನ್ನು ಹೊಂದಿರತಕ್ಕದ್ದು. Age: Below 70yrs | 3 | Chikballapura DH – 1<br>Gowribidanur GH – 1<br>Sidlaghatta GH – 1 |
| 7 | NRC / SNCU Medical Officer | B.30.9.2 / 8.1.9.2 | 50,000 | MBBS ಉತ್ತೀರ್ಣರಾಗಿ ಇಂಟರ್ನ್‌ಷಿಪ್‌ನ್ನು ಖಡ್ಡಾಯವಾಗಿ ಪೂರ್ಣಗೊಳಿಸಿರಬೇಕು. ಕೆ.ಎಂ.ಸಿ (ಕರ್ನಾಟಕ ಮೆಡಿಕಲ್ ಕೌನ್ಸಿಲ್) ನೋಂದಣಿಯನ್ನು ಹೊಂದಿರತಕ್ಕದ್ದು. Age: Below 70yrs | 2 | DH -2<br>(NRC -1<br>SNCU-1) |

| | | | | | | |
|---|---|---|---|---|---|---|
| 8 | Ayush MO RBSK | B.30.7.1.a / 8.1.7.1.a | 25,000 | ವೈದ್ಯಾಧಿಕಾರಿಗಳು BAMS ಉತ್ತೀರ್ಣರಾಗಿ ಇಂಟರ್ನ್‌ಷಿಪ್‌ನ್ನು ಖಡ್ಡಾಯವಾಗಿ ಪೂರ್ಣಗೊಳಿಸಿರಬೇಕು. ಕೆ.ಎಂ.ಸಿ (ಕರ್ನಾಟಕ ಮೆಡಿಕಲ್ ಕೌನ್ಸಿಲ್) ನೋಂದಣಿಯನ್ನು ಹೊಂದಿರತಕ್ಕದ್ದು. Age Limit: 45 Yrs. | 1 | THO Chintamani- 1 |
| 9 | Ayush MO | B.30.6.1/ 8.1.6.1 | 16,170 | ವೈದ್ಯಾಧಿಕಾರಿಗಳು BAMS ಉತ್ತೀರ್ಣರಾಗಿ ಇಂಟರ್ನ್‌ಷಿಪ್‌ನ್ನು ಖಡ್ಡಾಯವಾಗಿ ಪೂರ್ಣಗೊಳಿಸಿರಬೇಕು. ಕೆ.ಎಂ.ಸಿ (ಕರ್ನಾಟಕ ಮೆಡಿಕಲ್ ಕೌನ್ಸಿಲ್) ನೋಂದಣಿಯನ್ನು ಹೊಂದಿರತಕ್ಕದ್ದು. Age Limit: 45 Yrs. | 1 | PHC Jangamakote-1 |
| 10 | ANM | B.30.1.1 /8.1.1.1 | 10,000 | S.S.L.C with ANM Training. Age Limit:40 yrs | 1 | PHC Yellodu – 1 |
| 11 | Finance cum logistic consultant | 16.4.2.3.2/ O.2.1.2.3 | 34,650 | Inter CA/Inter ICWA/Regular M.com or MBA (Finance/Material management) Up to 5 yrs Experience in State Level and Up to 3 yrs Experience in accounting including analysis financial reporting, 1 budgeting financial software and reporting. Working of working in Health care Financing/National Health Accounts. Age Limit:40 yrs | 1 | NCD Cell IDSP - 1 |
| 12 | Staff Nurse (ಮಹಿಳಾ ಅಭ್ಯರ್ಥಿಗಳಿಗೆ ಮಾತ್ರ) | B.30.1.2 / 8.1.1.2 | 11,500 | GNM Qualification as recognized by Nursing Council of India with Karnataka Nursing Council Registration 2 Years' Experience of Working in a Hospital, Age limit: 40 yrs. (ಮೀಸಲಾತಿ ಬಿಂದು 40 ರಿಂದ 48 ರವರೆಗೆ GM-5, SC-1, 2A-1, 3B-1, 3A-1 ) | 9 | District Hospital (NPHCE) – 1<br>(KMC) – 1<br>(SNCU) - 1<br>PHC Pathapalya-1<br>PHC Alipura-2<br>PHC Namagondlu-1<br>GH Gudibande-1<br>GH Sidlaghatta-1 |

| ಮೀಸಲಾತಿ | ಸಾ.ಅ | ಪ.ಜಾ | 2ಎ | 3ಎ | 3–ಬಿ | ಒಟ್ಟು |
|---|---|---|---|---|---|---|
| ಸಾ.ಅ | 5 | 1 | 1 | 1 | 1 | 9 |

**ಷರತ್ತು & ನಿಬಂಧನೆಗಳು**

- ಈ ನೇಮಕಾತಿಯು ಎನ್.ಹೆಚ್.ಎಂ / ಎನ್.ಯು.ಹೆಚ್.ಎಂ / ರಾಜ್ಯ ವಲಯದ ನಿಯಮಾವಳಿ, ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
- ಈ ಮೇಲ್ಕಂಡ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಚಾಲ್ತಿ ಇರುವ ಸರ್ಕಾರದ ನಿಯಮಗಳಂತೆ ನೇಮಕಾತಿ ಮಾಡಲಾಗುವುದು.
- 2021–22ನೇ ಸಾಲಿನ ಆರ್.ಓ.ಪಿ ಯಲ್ಲಿ ಹೊಸ ಹುದ್ದೆಗಳು ಮಂಜೂರಾದಲ್ಲಿ ಹಾಗೂ ಯಾವುದೇ ಹುದ್ದೆಗೆ ಅಗತ್ಯವಿರುವಷ್ಟು ಅಭ್ಯರ್ಥಿಗಳು ಅರ್ಜಿ ಸಲ್ಲಿಸದಿದ್ದಲ್ಲಿ ಅಥವಾ ಹೆಚ್ಚುವರಿ ಅರ್ಜಿಗಳನ್ನು ಸಲ್ಲಿಸಿರುವ ಅರ್ಜಿಗಳಲ್ಲಿ 31/03/2022ರ ಒಳಗೆ ಖಾಲಿಯಾಗುವ ಹುದ್ದೆಗಳನ್ನು Roll out Advertisement ಆಧಾರದಲ್ಲಿ ಭರ್ತಿ ಮಾಡಲಾಗುವುದು ಹಾಗೂ ಅರ್ಜಿ ಸ್ವೀಕೃತಿಯಾಗದೇ ಉಳಿದುಹೋಗುವ ಅಥವಾ ಖಾಲಿ ಇರುವ ಹುದ್ದೆಗಳಿಗೆ ಪ್ರತೀ ತಿಂಗಳ ಮೊದಲನೇ ಹಾಗೂ ನಾಲ್ಕನೇ ಸೋಮವಾರದಂದು ನೇರ ಸಂದರ್ಶನವನ್ನು ಆಯೋಜಿಸಲಾಗುವುದು. ಆಸಕ್ತಿ ಉಳ್ಳ ಅಭ್ಯರ್ಥಿಗಳು ಸದರಿ ದಿನದಂದು ಬೆಳಿಗ್ಗೆ 10.30 ರಿಂದ ಸಂಜೆ 5.30 ಗಂಟೆಯೊಳಗಾಗಿ ನೇರ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ.
- ಮೀಸಲಾತಿ ಕೋರುವ ಅಭ್ಯರ್ಥಿಗಳು ಅದಕ್ಕೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ಸಂದರ್ಶನಕ್ಕೆ ಹಾಜರಾದ ದಿನದಂದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಹಾಗೂ ಸದರಿ ಪ್ರಮಾಣ ಪತ್ರವು ವ್ಯಾಲಿಡಿಟಿ ಅವಧಿ ಹೊಂದಿರತಕ್ಕದ್ದು. ವ್ಯಾಲಿಡಿಟಿ ಮುಗಿದ ಪ್ರಮಾಣ ಪತ್ರಗಳನ್ನು ಸಲ್ಲಿಸದ ಪಕ್ಷದಲ್ಲಿ ಅಂತಹ ಅಭ್ಯರ್ಥಿಯನ್ನು ತಿರಸ್ಕರಿಸಲಾಗುವುದು.
- ಹುದ್ದೆಗಳಿಗೆ ಸೂಚಿಸಿದ ವಿದ್ಯಾರ್ಹತೆ ಇಲ್ಲದಿರುವುದು ಹಾಗೂ ಫಲಿತಾಂಶಕ್ಕೆ ಕಾಯುತ್ತಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದಿಲ್ಲ.
- ಈ ಗುತ್ತಿಗೆ ಆಧಾರದ ಸೇವೆಯ ಆಯ್ಕೆಯನ್ನು ನಿಧಿಷ್ಠ ಸ್ಥಳಗಳಿಗೆ ಮಾಡಿಕೊಳ್ಳುವುದರಿಂದ ಅಭ್ಯರ್ಥಿಯು ಬೇಡಿಕೆಯ ಮೇಲೆ ಯಾವುದೇ ಸ್ಥಳಕ್ಕೆ ವರ್ಗಾವಣೆಗಾಗಲಿ/ಪರಸ್ಪರ ವರ್ಗಾವಣೆಯಾಗಲೀ ಅಥವಾ ನಿಯೋಜನೆಗಾಗಲೀ ಅವಕಾಶವಿರುವುದಿಲ್ಲ.

ಸಹಿ/–

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,**
**ಚಿಕ್ಕಬಳ್ಳಾಪುರ ಜಿಲ್ಲೆ**

**ಪ್ರತಿಯನ್ನು:–**

1. ಮಾನ್ಯ ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರ ಅವಗಾಹನೆಗೆ ಸಲ್ಲಿಸುತ್ತಾ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
3. ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಜಿಲ್ಲೆ ರವರ ಅವಗಾಹನೆಗೆ ಸಲ್ಲಿಸುತ್ತಾ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
4. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆ.ಕು.ಕ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮಾನ್ಯ ಮುಖ್ಯ ಆಡಳಿತಾಧಿಕಾರಿಗಳು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಜಿಲ್ಲಾ ನೋಡಲ್ ಅಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.

8. ಜಿಲ್ಲಾ ಮಾಹಿತಿ ಮತ್ತು ತಂತ್ರಜ್ಞಾನ ಅಧಿಕಾರಿಗಳು, ಎನ್.ಐ.ಸಿ, ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ ರವರಿಗೆ ಸಲ್ಲಿಸುತ್ತಾ ಜಿಲ್ಲಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿದೆ.
9. ಜಿಲ್ಲಾ ಶಸ್ತ್ರಚಿಕಿತ್ಸಕರು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿಗಾಗಿ ರವಾನಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
10. ಎಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
11. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ ರವರ ಮಾಹಿತಿ ಹಾಗೂ ಅವಗಾಹನೆಗಾಗಿ ಸಲ್ಲಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
12. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು ಮತ್ತು ಎಲ್ಲಾ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಮಾಹಿತಿಗಾಗಿ ರವಾನಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.
13. ಕಚೇರಿ ಪ್ರತಿ.

**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,**
**ಚಿಕ್ಕಬಳ್ಳಾಪುರ ಜಿಲ್ಲೆ**